**ಸಿ ಸಿ ಸಂಖ್ಯೆ:1102/2024**

**ಪಿ ಡಬ್ಲ್ಯೂ:1**

**ದಿನಾಂಕ: 17.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಎಂ ಎಂ ಎಂ ಅವರಿಂದ:**

**8.** ನಾನು ಮತ್ತು ನನ್ನ ಸಹೋದರರು ಬೇರೆ ಬೇರೆ ಆಗಿರುತ್ತೇವೆ. ನನ್ನ ಒಬ್ಬ ಸಹೋದರ ಮಂಗಳ ಮುಖಿ ಇದ್ದಾನೆ. ನಾನು ಮತ್ತು ಆತ ಹಾಗೂ ನಮ್ಮ ಕುಟುಂಬದವರು ಒಟ್ಟಾಗಿ ಇದ್ದೇವೆ. ನಮ್ಮ ಮಂಗಳ ಮುಖಿ ಸಹೋದರನನ್ನು ನಾನೇ ನೋಡಿಕೊಂಡು ಹೋಗುತ್ತಿದ್ದೇನೆ. ನನಗೆ 3 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇದ್ದಾರೆ. ನನ್ನ ಜೋತೆ ನನ್ನ ಹೆಂಡತಿ ಮತ್ತು ನನ್ನ ತಾಯಿ ಇದ್ದಾರೆ. ನಮ್ಮ ಕುಟುಂಬದಲ್ಲಿ ಒಟ್ಟು 9 ಜನ ಇದ್ದೇವೆ. ಸಂಪೂರ್ಣ ಕುಟುಂಬದ ಖರ್ಚು ವೆಚ್ಚವನ್ನು ನಾನೇ ನೋಡಿಕೊಂಡು ಹೋಗುತ್ತಿದ್ದೇನೆ. ಕುಟುಂಬಕ್ಕೆ ಬೇಕಾದ ಎಲ್ಲ ಸಾಮಗ್ರಿಗಳನ್ನು ನಾನು ಖರೀದಿ ಮಾಡಿ ತರುತ್ತೇನೆ. ನಮ್ಮ ಕುಟುಂಬಕ್ಕೆ ರೇಷನ್ ಹಾಗೂ ಇತರೆ ಖರ್ಚಿಗೆ 1000 ದಿಂದ 1500 ಖರ್ಚು ಆಗುತ್ತದೆ. ತಿಂಗಳಿಗೆ 8-10 ಸಾವಿರ ಖರ್ಚು ಆಗುತ್ತದೆ. ಕುಟುಂಬದ ಆದಾಯದ ಮೂಲ ನಾನೇ ದುಡಿದು ನೋಡಿಕೊಂಡು ಹೋಗುತ್ತೇನೆ.

**9.** ಆರೋಪಿ ನನ್ನ ಖಾಸ ಚಿಕ್ಕಪ್ಪನ ಮಗ. ಆರೋಪಿಗೆ ಯಾವುದೇ ರೀತಿ ಆದಾಯ ಇಲ್ಲ ಎಂದರೆ ಸರಿ. ಆರೋಪಿಗೆ 3 ಜನ ಗಂಡು ಮಕ್ಕಳು ಮಾತ್ರ ಇದ್ದಾರೆ. ಸದರಿ ಮಕ್ಕಳು ಚಿಕ್ಕವರು ಇದ್ದಾರೆ. ಆರೋಪಿ ಮತ್ತು ಆತನ ಹೆಂಡತಿ ಕೂಲಿ ಮಾಡಿ ಜೀವನ ಮಾಡುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಸಹ ಕೂಲಿ ಮಾಡಿ ಜೀವನ ಮಾಡುತ್ತೇನೆ.

**10.** ನಾನು 2 ಖಾತೆ ಹೊಂದಿರುತ್ತೇನೆ. ಒಂದು ಹನಮಸಾಗರ ಎಸ್ ಬಿ ಐ ಬ್ಯಾಂಕಿನಲ್ಲಿ ಇನ್ನೊಂದು ಗುಡದೂರಕಲ್ಲ ಪೋಸ್ಟ ಆಫೀಸಿನಲ್ಲಿ ಹೊಂದಿರುತ್ತೇನೆ. ನಾನು ಅದು

ಅಲ್ಲದೇ ನಿರಾಣಿ ಪ್ಯಾಕ್ಟರಿಯಲ್ಲಿ ಒಂದು ಖಾತೆ ಹೊಂದಿರುತ್ತೇನೆ. ಈ ಖಾತೆಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಖಾತೆ ಹೊಂದಿಲ್ಲ.

11. ಈ ನ್ಯಾಯಾಲಯದಲ್ಲಿ ನನ್ನವು 2-3 ಕೇಸ್ ಇವೆ. ಅವುಗಳಲ್ಲಿ ಒಂದು ಅಣ್ಣತಮ್ಮಂದಿರ ಜಗಳದ ಕುರಿತು, ಇನ್ನೊಂದು ಸಮಾಜದ ಕುರಿತು ಹಾಗೂ ಎರಡೂ ಚೆಕ್ ಕೇಸ್ ಗಳು ಇವೆ. ಅಣ್ಣತಮ್ಮಂದಿರ ಜಗಳ ನಮ್ಮ ಮತ್ತು ಆರೋಪಿ ನಡುವಿನ ಕ್ರಿಮಿನಲ್ ಪ್ರಕರಣ ಎಂದರೆ ಸರಿ. ಈ ಪ್ರಕರಣದಲ್ಲಿ 5 ಲಕ್ಷದ ಚೆಕ್ಕಿಗೆ ಇನ್ನೊಂದು ಕೇಸನಲ್ಲಿ 9 ಲಕ್ಷದ ಚೆಕ್ ಇದೆ. 9 ಲ ಕ್ಷದ ಚೆಕ್ ಕೇಸನ್ನು ಗೋಪಿ ಶಂಕ್ರಪ್ಪ ಲಮಾಣಿ ಅವರ ಮೇಲೆ ಹಾಕಿರುತ್ತೇನೆ. ಗೋಪಿ ತಂದೆ ಶಂಕ್ರಪ್ಪ ಕಡ್ಡಿರಾಮಗೋಳ ಸಾಃಅಬ್ಬಿಗೇರಿ ತಾಂಡ ಅವರ ಮೇಲೆ ಸಹ ನಾನು 9 ಲಕ್ಷ ರೂ.ಗಳಿಗೆ ಚೆಕ್ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣ ಸಹ ಸಾಕ್ಷಿ ವಿಚಾರಣೆಗೆ ಬಂದಿದೆ ಎಂದರೆ ಸರಿ. ಈಗ ತೋರಿಸಿದ ದಾಖಲೆ ಸದರಿ ಪ್ರಕರಣದ ದೂರಿನ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ 4 ಎಂದು ಗುರುತಿಸಲಾಯಿತು. ಸದರಿ ಪ್ರಕರಣ ಈಗ ತೋರಿಸಲಾದ ದಾಖಲೆಯಂತೆ ದಿಃ06-08-2025 ರಂದು ಇತ್ತು ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ 5 ಎಂದು ಗುರುತಿಸಲಾಯಿತು. ಸದರಿ ಪ್ರಕಣದಲ್ಲಿ ಹಾಜರುಪಡಿಸಿದ ಚೆಕ್ ನಲ್ಲಿರುವ ಅಕ್ಷರಗಳು ಈ ಪ್ರಕರಣದಲ್ಲಿರುವ ಚೆಕ್ ನ ಅಕ್ಷರಗಳು ಒಂದೇ ಎಂದರೆ ಸರಿಯಲ್ಲ.

12. ಆಸ್ತಿ ಸಂಬಂಧ ನನ್ನ ಯಾವುದೇ ಕೇಸ್ ಬಾಕಿ ಇಲ್ಲ. ಮನೆ ನಂಬರ 75/2 ಮೊದಲು ನಮ್ಮ ತಂದೆ ಠಾಕರಪ್ಪನ ಹೆಸರಿನಲ್ಲಿ ಇತ್ತು ನಂತರ ನನ್ನ ಹೆಸರಿಗೆ ಆಗಿದೆ. 75/1 ಮನೆ ನನ್ನ ಹೆಸರಿನಲ್ಲಿ ಇದೆ. ಅದು ಮೊದಲು ನನ್ನ ತಂದೆಯ ಹೆಸರಿನಲ್ಲಿ ಇತ್ತು. 75/1 ಮತ್ತು 75/2 ರ ಮನೆ ಕಂಪ್ಯೂಟರ ಉತಾರಗಳು ಮೊದಲು ಇದ್ದವು ಈಗ ರದ್ದುಪಡಿಸಿದ್ದಾರೆ. ನನ್ನ ಚಿಕ್ಕಪ್ಪ ಮತ್ತು ಆರೋಪಿ ಡಿಸಿ ಗೆ ಮತ್ತು ತಾಲೂಕ ಪಂಚಾಯತಿಗೆ, ಜಿಲ್ಲಾ ಪಂಚಾಯತಿಗೆ 2021 ರಿಂದ ಪತ್ರಗಳನ್ನು ಕೊಟ್ಟಿದ್ದರಿಂದ ರದ್ದಾಗಿರುತ್ತದೆ ಎಂದರೆ ಸರಿ. 2021 ರಿಂದ ನನ್ನ ಹಾಗೂ ಆರೋಪಿ ಮತ್ತು ನಮ್ಮ ಚಿಕ್ಕಪ್ಪನ ನಡುವೆ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ಗ್ರಾಮ

ಪಂಚಾಯತಿ ಎರಗೇರಾದಲ್ಲಿ ಇದೆ. ಆರೋಪಿ ಮತ್ತು ನಮ್ಮ ಚಿಕ್ಕಪ್ಪ ಕೊಟ್ಟ ಅರ್ಜಿ ಆದಾರದ ಮೇಲೆ ಮನೆ ಉತಾರ ರದ್ದಾಗಿದೆ ಎಂದರೆ ಸರಿ. ದಿಃ**29.05.2024** ರಂದು ತಾಲೂಕ ಪಂಚಾಯತಿಯವರು ಮನೆ ಉತಾರ ರದ್ದು ಮಾಡಿದ ಕುರಿತು ಹಿಂಬರಹ ಕೊಟ್ಟಿದ್ದಾರೆ ಎಂದರೆ ಸರಿ. ಆ ರೀತಿ ಹಿಂಬರವನ್ನು ತುಳಜಪ್ಪನಿಗೂ ಸಹ ಕಳುಹಿಸಿರುತ್ತಾರೆ ಎಂದರೆ ಸರಿ. ಈಗ ತೋರಿಸಲಾದ ದಾಖಲೆ ಸದರಿ ಹಿಂಬರಹದ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ **6** ಎಂದು ಗುರುತಿಸಲಾಯಿತು.

**13.** ಆ ರೀತಿ ರದ್ದು ಮಾಡಿದ ನಂತರ ನಾನು ಇದೇ ನ್ಯಾಯಾಲಯದಲ್ಲಿ ತಾಲೂಕ ಪಂಚಾಯತಿ, ಎಡಿಎಲ್ಅರ್ ಮತ್ತು ಇನ್ನೊಬ್ಬ ವ್ಯಕ್ತಿಯ ವಿರುದ್ದ ಅಸಲು ದಾವೆ ನಂಃ**31/2025** ದಾಖಲಿಸಿದ್ದೇನೆ ಎಂದರೆ ಸರಿ. ಲಾಲೇಪ್ಪ ತಂದೆ ತುಕಪ್ಪ ಚವಾಣ ಸಾಃಮಾವಿನ ಇಟಗಿ ಅವರ ಮತ್ತು ನನ್ನ ನಡುವೆ ಯಾವುದೇ ಸಂಬಂಧ ಮತ್ತು ವ್ಯಾಜ್ಯ ಇಲ್ಲ ಎಂದರೆ ಸರಿ. ಅವರ ಮೇಲೆ ನಾನು ಯಾವುದೇ ಸಿವಿಲ್ ಮತ್ತು ಕ್ರಿಮೀನಲ್ ಕೇಸ್ ಹಾಕಿಲ್ಲ.

**14.** ನಾನು ಕಬ್ಬು ಕಡಿಯಲು ಹೋದ ಸಮಯದಲ್ಲಿ ನನ್ನ ಮೇಲೆ ಸಮಾಜದವರು ಎಂದು ಕೇಸ್ ಹಾಕಿರುತ್ತಾರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ಕೇಸಲ್ಲಿ ನನ್ನ ಹಾಗೂ ನನ್ನ ಸಹೋದರನ ಹೆಸರು ಇದೆ ಹಾಗೂ ತುಳಜಪ್ಪನ ಹೆಸರು ಸಹ ಇದೆ. ದಿಃ**27.07.2022** ರಂದು ಆರೋಪಿಯ ತಾಯಿ ಅವರ ಕುಟುಂಬವನ್ನು ಸಮಾಜದಿಂದ ಹೊರಹಾಕಿರುತ್ತಾರೆ ಎಂದು ಡಿಸಿ, ಎಸ್ ಪಿ ಹಾಗೂ ಪಿಎಸ್ಐ ಹನಮಸಾಗರ ಮತ್ತು ಕುಷ್ಟಗಿ ಸಿಪಿಐ ರವರಿಗೆ ನನ್ನ ಹಾಗೂ ಇತರರ ವಿರುದ್ಧ ದೂರು ನೀಡಿದ್ದರು ಎಂದರೆ ಸಾಕ್ಷಿಯು ನಾನು ಒಬ್ಬನೇ ಸಮಾಜ ಅಲ್ಲ ಎಂದು ನುಡಿಯುತ್ತಾರೆ. ಆ ಪ್ರಕರಣದ ಸಂಬಂಧ ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ದೂರು ಆಗಿದೆ ಎಂದು ಹೇಳಿದ್ದರು, ನಾನು ಠಾಣೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. **2023** ರಲ್ಲಿ ಆರೋಪಿಯ ತಂದೆ ನನ್ನ ವಿರುದ್ಧ ಸಮಾಜದಿಂದ ಹೊರ ಹಾಕಿರುತ್ತಾರೆ ಎಂದು ಹನಮಸಾಗರ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಅದು ಸುಳ್ಳು ಎಂದು

ನುಡಿಯುತ್ತಾರೆ. ಆದಾದನಂತರ ಆರೋಪಿಯ ಹೆಂಡತಿಯ ಮೇಲೆ ಹಲ್ಲೆ ಮಾಡಿರುತ್ತೇನೆಂದು ಅವರು ದೂರು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸಹ ಅವರ ವಿರುದ್ಧ ದೂರು ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಸುಮಾರು 3 ವರ್ಷಗಳಿಂದ ನಮ್ಮ ಹಾಗೂ ಆರೋಪಿ ಕುಟುಂಬದ ನಡುವೆ ಕೇಸ್ ಆಂಡ್ ಕೌಂಟರ ಕೇಸ್ ಆಗಿ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗ ಒಂದು ವರ್ಷದಿಂದ ಆ ರೀತಿ ಕೇಸ ಹಾಕುತ್ತಿದ್ದಾರೆ ಎಂದು ನುಡಿಯುತ್ತಾರೆ.

**15.** ನಮ್ಮ ಚಿಕ್ಕಪ್ಪನ 7 ಜನ ಮಕ್ಕಳು ಬೇರೆ ಆಗಿ ಅವರ ಕುಟುಂಬವನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಆರೋಪಿ ನನ್ನ ಮನೆಗೆ ಬಂದು 2023 ರಲ್ಲಿ ಹಣ ಪಡೆದಿದ್ದ. ತಿಂಗಳು ಮತ್ತು ತಾರೀಖು ನೆನಪು ಇಲ್ಲ. ನನ್ನ ಹಾಗೂ ಆರೋಪಿಯ ಮನೆ 1 ಕಿ.ಮೀಟರ ಒಳಗಡೆ ಅಂತರದಲ್ಲಿ ಇದೆ. ಆರೋಪಿ ಸಾಯಂಕಾಲ 3-4 ಗಂಟೆ ಸಮಯದಲ್ಲಿ ಹಣ ಕೇಳಲು ಬಂದಿದ್ದ. ಆ ಸಮಯದಲ್ಲಿ ನಾನು, ನನ್ನ ತಾಯಿ ಮತ್ತು ಹೆಂಡತಿ ಇದ್ದೇವು. ಹಣ ಕೇಳಲು ಆರೋಪಿ ಮತ್ತು ಆತನ ಹೆಂಡತಿ ಬಂದಿದ್ದರು. ಕೇಸ್ ಹಾಕುವಾಗ ಮತ್ತು ನೋಟಿಸು ಕಳುಹಿಸುವಾಗ ಸದರಿ ಮಾಹಿತಿಯನ್ನು ವಕೀಲರಿಗೆ ನೀಡಿಲ್ಲ. ಯಾವ ಕಾರಣಕ್ಕೆ ಸದರಿ ಮಾಹಿತಿಯನ್ನು ನೀಡಿಲ್ಲ ಎಂದರೆ ಕಾರಣ ಇಲ್ಲ ಆದರೆ ಚಕ್ಕಿನ ಡೇಟ್ ಮಾತ್ರ ಹೇಳಿರುತ್ತೇನೆ.

**16.** ನನ್ನ ಚಿಕ್ಕಪ್ಪನ ಮಕ್ಕಳು, ನಾವು, ಆರೋಪಿತರು ಒಂದೇ ಗ್ರಾಮದಲ್ಲಿ ಇದ್ದೇವೆ. 2023 ರಲ್ಲಿ ನನ್ನ, ಆರೋಪಿ ಮತ್ತು ತುಳಜಪ್ಪನ ಮಕ್ಕಳ ನಡುವೆ ಸಂಬಂಧ ಚೆನ್ನಾಗಿತ್ತು. ಅವರ ಕುಟುಂಬದಲ್ಲಿ ಯಾವುದೇ ಕಾರ್ಯಕ್ರಮ ನಡೆದರೆ ಹಾಗೂ ನಮ್ಮ ಕುಟುಂಬದಲ್ಲಿ ಯಾವುದೇ ಕಾರ್ಯಕ್ರಮ ನಡೆದರೆ ನಾವು ಮತ್ತು ಅವರು ಹೋಗುವುದು ಮತ್ತು ಬರುವುದು ಮಾಡುತ್ತಿದ್ದೇವು.

**17.** ಆರೋಪಿ ಹಣ ಕೇಳಿದ ದಿನವೇ ನಾನು ಹಣ ಕೊಟ್ಟಿಲ್ಲ. ಆರೋಪಿ ಶುಕ್ರವಾರದ ದಿನ ಹಣ ಕೇಳಿರುತ್ತಾನೆ ನಾನು ಸೋಮವಾರದ ದಿನ ಹಣ ಕೊಟ್ಟಿರುತ್ತೇನೆ. ಆರೋಪಿಗೆ ಹಣ ಯಾವ ಕಾರಣಕ್ಕೆ ಬೇಕು ಎಂದು ನಾನು ಕೇಳಿರುತ್ತೇನೆ. ಆತ ಜಾಗ

ತೆಗೆದುಕೊಂಡದ್ದು ಕೊಡಲು, ತಂಗಿಯ ಮದುವೆ ಸಾಲವನ್ನು ತನಗೆ ಹೊರಿಸಿದ್ದಾರೆ ಅದನ್ನು ತೀರಿಸಲು ಬೇಕು ಎಂದು ಹೇಳಿರುತ್ತಾನೆ. ಆರೋಪಿಯು ಜಾಗ ತೆಗೆದುಕೊಂಡ ವ್ಯವಹಾರದಲ್ಲಿ ನಾನು ಭಾಗವಹಿಸಿಲ್ಲ ಆದರೆ ಕೇಳಿ ತಿಳಿದುಕೊಂಡಿರುತ್ತೇನೆ. ಆರೋಪಿ ಜಾಗವನ್ನು ಯಾರಿಂದ, ಎಷ್ಟು ಹಣಕ್ಕೆ ಮತ್ತು ಯಾವಾಗ ಪಡೆದಿರುತ್ತಾನೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿಯ ಯಾವ ತಂಗಿ ಮದುವೆ ಸಾಲ ಎಂದರೆ ಸಾಕ್ಷಿಯು ಕವಿತಾ ಎಂದು ನುಡಿಯುತ್ತಾರೆ. ಕವಿತಾಳ ಮದುವೆಯಲ್ಲಿ ನಾನು ಮತ್ತು ನಮ್ಮ ಕುಟುಂಬದವರು ಭಾಗಿಯಾಗಿದ್ದೇವು. ಕವಿತಾಳ ಮದುವೆ ಆಕೆಯ ಗಂಡನ ಮನೆಯ ಮುಂದೆ ಆಗಿದೆ. ಸದರಿ ಮದುವೆಯನ್ನು ಗಂಡನ ಮನೆಯವರು ಮಾಡಿಕೊಂಡಿರುತ್ತಾರೆ. ಆಕೆಯ ಮದುವೆ 2020-21 ರ ಸಾಲಿನಲ್ಲಿ ಆಗಿರಬಹುದು ಆದರೆ ನಿಖರವಾಗಿ ಗೊತ್ತಿಲ್ಲ. ನಿಖರವಾದ ಮದುವೆ, ದಿನಾಂಕ, ತಿಂಗಳು ವರ್ಷ ಮತ್ತು ಸ್ಥಳ ನನಗೆ ಹೇಳಲು ಬರುವುದಿಲ್ಲ. ಕೇಸ ಮಾಡುವಾಗ ಮತ್ತು ನೋಟಿಸು ಕಳುಹಿಸುವಾಗ ಆರೋಪಿ ಜಾಗ ಖರೀದಿಸಿದ ಸಂಬಂಧ ಹಾಗೂ ಕವಿತಾಳ ಮದುವೆಯ ಸಾಲ ತೀರಿಸುವ ಸಂಬಂಧ ನನ್ನ ಬಳಿ ಹಣ ಪಡೆದಿದ್ದ ಎಂದು ಹೇಳಿ ಬರೆಸಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.)

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ